<u>ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 30-06 -2016 ರಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.</u>

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಡಿ.ಎನ್. ನರಸಿಂಹರಾಜು, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು .
3. ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
6. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು.
7. ಶ್ರೀ ಜಿ.ಸಿ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.
8. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ.

<u>ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-</u>

1) ಕರ್ನಾಟಕ ಮಾಹಿತಿ ಆಯೋಗದ ಹೊರಗುತ್ತಿಗೆ ನೌಕರರ ಟೆಂಡರ್ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಕರ್ನಾಟಕ ಮಾಹಿತಿ ಆಯೋಗದ ಹೊರಗುತ್ತಿಗೆ ನೌಕರರ ಟೆಂಡರ್ ಅವಧಿಯು ಮಾರ್ಚ್ 31, 2016ಕ್ಕೆ ಅಂತ್ಯಗೊಂಡಿದ್ದು, ಆಯೋಗದ ಕೆಲವೊಂದು ಹುದ್ದೆಗಳ ಕುರಿತು ಘಟನೋತ್ತರ ಅನುಮೋದನೆಗೆ ಸರ್ಕಾರಕ್ಕೆ ಕಳುಹಿಸಿದ್ದು, ಈ ಅನುಮೋದನೆ ಸರ್ಕಾರದ ಹಂತದಲ್ಲಿಯೇ ಬಾಕಿ ಇರುವುದರಿಂದ ಕಳೆದ 03 ತಿಂಗಳ ಅವಧಿಗೆ ಇದೇ ಸೇವಾ ಷರತ್ತುಗಳನ್ನು ಮುಂದುವರೆಸಿ, ಹೊರಗುತ್ತಿಗೆ ನೌಕರರ ವೇತನವನ್ನು ಬಟವಾಡೆ ಮಾಡಲು ಇದೇ ಸಂಸ್ಥೆಗೆ ಈ ಹಿಂದೆ ತಿಳಿಸಲಾಗಿದ್ದು ಮತ್ತೆ ಇದೇ ಸೇವಾ ಷರತ್ತುಗಳನ್ನು ಆಧರಿಸಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಇವರ ಟೆಂಡರ್ ಅವಧಿಯನ್ನು ಮುಂದಿನ ಆದೇಶ ಆಗುವವರೆವಿಗೂ ವಿಸ್ತರಿಸಲು ಸಭೆ ಸಮ್ಮತಿಸಿತು.

ಕ್ರಮ: ಕಾರ್ಯದರ್ಶಿ

2) ಕರ್ನಾಟಕ ಮಾಹಿತಿ ಹಕ್ಕು ನಿಯಮಗಳು-2005ರ 6(2)(ಐ)ರಂತೆ ಅರ್ಜಿದಾರರು ಪ್ರತಿವಾದಿಗಳ ಸಂಪೂರ್ಣ ಹೆಸರು ಮತ್ತು ವಿಳಾಸಗಳೊಂದಿಗೆ ಅರ್ಜಿಯನ್ನು 2ನೇ ಮೇಲ್ಮನವಿ ಸಲ್ಲಿಸತಕ್ಕದ್ದು. ಈ ಕುರಿತು ಆಯೋಗದ ಆಕ್ಷೇಪಣಾ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

ಈ ಬಗ್ಗೆ ಸಭೆ ಕೂಲಂಕುಷವಾಗಿ ಚರ್ಚಿಸಿ ನಿಯಮಗಳ ಅನ್ವಯ ಅರ್ಜಿದಾರರು ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರನ್ನು ನಮೂದಸಬೇಕಿದ್ದು ಎಲ್ಲಿ ನಮೂದಿಸಿರುವುದಿಲ್ಲವೋ ಅಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರನ್ನು ಕಡ್ಡಾಯವಾಗಿ ನಮೂದಿಸಬೇಕು ಎಂದು ಪರಿಗಣಿಸಿ ಅರ್ಜಿಗಳ ಪರಿಶೀಲನಾ ಹಂತದಲ್ಲಿಯೇ ಆಕ್ಷೇಪಣೆ ಮೂಲಕ ತಿಳಿಸಲು ಕ್ರಮ ಕೈಗೊಳ್ಳಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

3) ಆಯೋಗದಲ್ಲಿ ನಡೆಸುವ ವಿಡಿಯೋ ಕನ್ಫರೆನ್ಸ್ ಕುರಿತು ರಚಿಸಬೇಕಾದ ನಿಯಮಗಳ ಬಗ್ಗೆ.

ಆಯೋಗದಲ್ಲಿ ನಡೆಸುವ ವಿಡಿಯೋ ಕನ್ಫರೆನ್ಸ್‌ನ ನಿಯಮಗಳ ರಚನೆ ಕುರಿತು ಈಗಾಗಲೇ 2014-15ರ ಆಯೋಗದ ವಾರ್ಷಿಕ ವರದಿಯಲ್ಲಿ ಸರ್ಕಾರಕ್ಕೆ ಕೋರಿದ್ದ ಹಿನ್ನಲೆಯಲ್ಲಿ ಸರ್ಕಾರದ ವತಿಯಿಂದ ಈ ಸಂಬಂಧ ನಿಯಮಗಳನ್ನು ರಚಿಸಲು ಕರಡು ತಯಾರಿಸಲು ಸರ್ಕಾರದಿಂದ ಪತ್ರ ಬಂದಿರುವ ಬಗ್ಗೆ ಕಾರ್ಯದರ್ಶಿಗಳು ಪ್ರಸ್ತಾಪಿಸಿದಾಗ ಈ ಬಗ್ಗೆ ಮುಂದಿನ ಆಯೋಗದ ಸಭೆಯಲ್ಲಿ ಚರ್ಚಿಸಲಾಗುವುದಾಗಿ ಸಭೆ ತೀರ್ಮಾನಿಸಿತು.

ಕ್ರಮ: ಕಾರ್ಯದರ್ಶಿ

4) ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡದ ಬಗ್ಗೆ.

ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡದ ಸುಧಾರಿತ ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ನೀಡಿದ್ದು, ಈ ಬಗ್ಗೆ ಸಭೆ ಚರ್ಚಿಸಿ ಬಂದಿರುವ ನಕ್ಷೆಯ ಕುರಿತು ಸಭೆ ಸಹಮತಿಯನ್ನು ಸೂಚಿಸಿತು. ಮುಂದುವರೆದು ಕಟ್ಟಡದಲ್ಲಿನ ಪೀಠೋಪಕರಣಗಳ ಬಗೆಗೆ ಆಯೋಗವು ದಿ: 16/06/2016 ರಂದು ಹೊಸ ಕಟ್ಟಡ ಪರಿವೀಕ್ಷಣೆ ಮಾಡಿದ್ದು ಲೋಕೋಪಯೋಗಿ ಇಲಾಖೆ ತೋರಿಸಿರುವ ಪೀಠೋಪಕರಣಗಳ ಬಗೆಗೆ ವಿವರವಾಗಿ ಚರ್ಚಿಸಿ ಒದಗಿಸಬಹುದಾದ ಪೀಠೋಪಕರಣಗಳ ಮಾದರಿಯನ್ನು ಸೂಚಿಸಿ K.T.P.P Act ನ ಅನ್ವಯ ಲೋಕೋಪಯೋಗಿ ಇಲಾಖೆಯಿಂದ Procure ಮಾಡಲು ಒಪ್ಪಿತು.

ಕ್ರಮ: ಕಾರ್ಯದರ್ಶಿ

5) ಮಾಹಿತಿ ಹಕ್ಕು ಕಾಯ್ದೆ-2005ರ ಕರ್ನಾಟಕ ನಿಯಮಗಳಲ್ಲಿ ತಿದ್ದುಪಡಿ ಕುರಿತು.

ಮಾಹಿತಿ ಹಕ್ಕು ಕಾಯ್ದೆ-2005 ಜಾರಿಗೆ ಬಂದು 10 ವರ್ಷ ಕಳೆದಿದ್ದು, ಕಾಯ್ದೆಯ ವಿವಿಧ ಕಲಂಗಳನ್ನು ಆಧರಿಸಿ ರಾಜ್ಯ ಉಚ್ಚ ನ್ಯಾಯಾಲಯವು ಕೆಲವೊಂದು ತೀರ್ಪುಗಳನ್ನು ನೀಡಿದ್ದು, ಅದರಂತೆ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ನಿಯಮಗಳಲ್ಲಿ ಅವಶ್ಯಕ ತಿದ್ದುಪಡಿಗಳ ಬಗ್ಗೆ ಸಲಹೆ ನೀಡಲು ನಿವೃತ್ತ ನ್ಯಾಯಾಧೀಶರೊಬ್ಬರನ್ನು ಕರಡು ನಿಯಮಾವಳಿಗಳನ್ನು ತಯಾರಿಸಲು ಹಾಗೂ ಈ ಸಂಬಂಧ ಅವರ ಸಮಾಲೋಚನಾ ಶುಲ್ಕಕ್ಕಾಗಿ ಆಯೋಗದ ಆಯವ್ಯಯದಲ್ಲಿ ಸುಮಾರು ರೂ. 50,000=00ಗಳನ್ನು ಕಾಯ್ದಿರಿಸಲು ಹಾಗೂ ಈ ಬಗ್ಗೆ ಕ್ರಮ ವಹಿಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

6) ರಿಟ್ ಪಿಟಿಷನ್ ನಂ.28310-311 ಮತ್ತು 45540-45542/2015 ಬಗ್ಗೆ ಚರ್ಚಿಸಿ ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್‌ರವರ ಕಾನೂನು ಅಭಿಪ್ರಾಯದ ಹಿನ್ನಲೆಯಲ್ಲಿ ಸಿ.ಆ.ಸು.ಇ., ಜನಸ್ಪಂದನ, ಇವರಿಗೆ ಕೇಂದ್ರ ಸರ್ಕಾರದ ಡಿ.ಒ.ಪಿ.ಟಿ., ಹಾಗೂ ಸಿ.ಐ.ಸಿ., ಇವರು ಈ ಬಗ್ಗೆ ತೆಗೆದುಕೊಂಡಿರುವ ತೀರ್ಮಾನಗಳನ್ನು ನಮಗೂ ಸಹ ತಿಳಿಸುವಂತೆ ಕೋರಲು ಪತ್ರಿಸಬಹುದು ಎಂದು ಸಭೆ ತೀರ್ಮಾನಿಸಿ ಕ್ರಮ ಕೈಗೊಳ್ಳಲು ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

08/07/2016

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು